ತಾಯಿಯ ಪ್ರಭಾವ

### ತಾಯಿಯಿಂದ ಕಲಿತ ಸತ್ಯಕಾಮ

ಉಪನಿಷತ್ತಿನ ಕಥೆ ಇದು. ಗುರುಕುಲಕ್ಕೆ ಹೋಗಿ ವಿದ್ಯಾಭ್ಯಾಸವನ್ನು ಕಲಿಯಬೇಕೆಂದು ಬಾಲಕ ಸತ್ಯಕಾಮನಿಗೆ ಆಸೆ. ಅದಕ್ಕೆ ತನ್ನ ಕುಲ ಗೋತ್ರಗಳ ಪರಿಚಯ ಬೇಕು. ಅವನು ತಾಯಿಯನ್ನು ಕೇಳಿದ. ದುರದೃಷ್ಟವಶಾತ್, ಅವಳಿಗೂ ಆ ವಿವರಗಳು ಗೊತ್ತಿರಲಿಲ್ಲ. ಅವಳು ಮಗನಿಗೆ ಹೇಳಿದಳು, "ಮಗೂ, ನನ್ನ ಹೆಸರು ಜಬಾಲಾ, ನಿನ್ನ ಹೆಸರು ಸತ್ಯಕಾಮ. ಅಷ್ಟನ್ನೇ ನಿನ್ನ ಗುರುಗಳಿಗೆ ಹೇಳು." ಸತ್ಯಕಾಮ ಹಾಗಿಯೇ ಮಾಡಿದ. ಗುರುಗಳು ಅವನ ಸತ್ಯನಿಷ್ಠೆಯನ್ನು ಮೆಚ್ಚಿಕೊಂಡರು; ಗುರುಕುಲಕ್ಕೆ ಸೇರಿಸಿಕೊಂಡರು. ಮುಂದೆ ಸತ್ಯಕಾಮ ದೊಡ್ಡ ಪಂಡಿತನಾದ. **ಇದಕ್ಕೆಲ್ಲ ಮೊದಲ ಪ್ರೇರಣೆ ಬಂದದ್ದು ಅವನ ತಾಯಿಯಿಂದಲೇ.**

### ತಾಯಿಯ ಮಡಿಲಿನಲ್ಲಿ ಆಧ್ಯಾತ್ಮಿಕ ಪಯಣದ ಆರಂಭ

ವಿಶ್ವವಿಖ್ಯಾತ ಸ್ವಾಮಿ ವಿವೇಕಾನಂದರು, ಆಧ್ಯಾತ್ಮಿಕತೆಯ ಮೊದಲ ಪಾಠಗಳನ್ನು ಕಲಿತಿದ್ದು ತಮ್ಮ ತಾಯಿ ಭುವನೇಶ್ವರಿ ದೇವಿಯ ತೊಡೆಯಲ್ಲಿ. ಅವರು ಬಾಲಕ ನರೇಂದ್ರನಿಗೆ ರಾಮಾಯಣ, ಮಹಾಭಾರತಗಳ ಕಥೆಗಳನ್ನು ಹೇಳುವರು. ರಾಮನ ಕಷ್ಟಸಹಿಷ್ಣುತೆ ನರೇಂದ್ರನಲ್ಲಿ ಗಾಢ ಪರಿಣಾಮ ಉಂಟುಮಾಡಿತು. ತನ್ನ ತಾಯಿಯೂ ಸೇರಿದಂತೆ ಮನೆಮಂದಿಯೆಲ್ಲ ರಾಮನನ್ನು ಪೂಜಿಸುವುದನ್ನು ಅವನು ನೋಡಿದ. ತಾನೂ ರಾಮನನ್ನು ಪೂಜಿಸಲು ಬಯಸಿ, ರಾಮ ಸೀತೆಯರ ವಿಗ್ರಹಗಳನ್ನು ಆರಾಧಿಸಲು, ಅವುಗಳ ಮುಂದೆ ಕುಳಿತು ಧ್ಯಾನಿಸಲು ಆರಂಭಿಸಿದ. ಹೀಗೆ, ಮುಂದೆ ನವಯುಗದ ಹರಿಕಾರರಾದ **ಸ್ವಾಮಿ ವಿವೇಕಾನಂದರಿಗೆ ಪ್ರೇರಣೆ ನೀಡಿದ್ದು, ಅವರ ತಾಯಿ.**

ತಂದೆಯ ಪ್ರಭಾವ

### ತಂದೆಯಿಂದ ಬಂದ ಸತ್ಯನಿಷ್ಠೆಯ ಬಳುವಳಿ

ಶ್ರೀರಾಮಕೃಷ್ಣರ ತಂದೆ ಕ್ಷುದಿರಾಮ ಚಟರ್ಜಿ ಬಹಳ ಧಾರ್ಮಿಕರು. ದೇರೆ ಎಂಬ ಗ್ರಾಮದಲ್ಲಿದ್ದ ಅವರನ್ನು, ಅಲ್ಲಿನ ಜಮೀನುದಾರ ಸುಳ್ಳು ಸಾಕ್ಷಿ ಹೇಳುವಂತೆ ಒತ್ತಾಯಿಸಿದ. ಅವರು ಒಪ್ಪದಿದ್ದಾಗ, ಅವರ ಮೇಲೇ ಕೋರ್ಟಿನಲ್ಲಿ ಕೇಸು ಹಾಕಿ, ಅವರ ಸ್ವಂತ ಹೊಲಗದ್ದೆಗಳನ್ನು ಕಿತ್ತುಕೊಂಡ. ಅಷ್ಟಾದರೂ ತಾವು ಹಿಡಿದ ಸತ್ಯಪಥದಿಂದ ಅವರು ವಿಚಲಿತರಾಗಲಿಲ್ಲ. ಭಗವಂತನ ಮೇಲೆ ಭಾರವಿಟ್ಟು, ಆ ಊರನ್ನೇ ಬಿಟ್ಟರು. ಕಾಮಾರಪುಕುರ ಎಂಬ ಇನ್ನೊಂದು ಗ್ರಾಮಕ್ಕೆ ಬಂದು, ಶ್ರೀಮಂತ ಸ್ನೇಹಿತನೊಬ್ಬ ಕೊಟ್ಟ ಸ್ವಲ್ಪ ಜಮೀನಿನ ಉತ್ಪನ್ನದಿಂದ, ಬಡತನದ ಬಾಳು ಬಾಳಿದರು. **ಶ್ರೀರಾಮಕೃಷ್ಣರ ಕಠೋರ ಸತ್ಯನಿಷ್ಠೆಗೆ ಅವರ ತಂದೆಯೇ ಆದರ್ಶವಾಗಿದ್ದರು.**

### ತಂದೆಯಿಂದ ಕಲಿತ ಮಹಾಮಾತೆ

ಶ್ರೀಶಾರದಾದೇವಿಯವರ ತಂದೆ, ರಾಮಚಂದ್ರ ಮುಖರ್ಜಿ ದಯಾಳು. ೧೮೬೪ ರ ಇಸವಿಯಲ್ಲಿ, ಬಂಗಾಳದಲ್ಲಿ ದೊಡ್ಡದೊಂದು ಕ್ಷಾಮ ಬಂದಿತ್ತು. ಸಾವಿರಾರು ಜನ ಆಹಾರವಿಲ್ಲದೆ ಅಲೆಯುತ್ತಿದ್ದರು. ರಾಮಚಂದ್ರ ಮುಖರ್ಜಿ ತನ್ನಲ್ಲಿದ್ದ ಆಹಾರದ ದಾಸ್ತಾನನ್ನು ಖರ್ಚುಮಾಡಿ, ಬಡಬಗ್ಗರಿಗೆ ಊಟ ಬಡಿಸುತ್ತಿದ್ದರು. ಉರಿಯುವ ಬಿಸಿಲಿನಲ್ಲಿ ಕುಳಿತು ಜನರು ಉಣ್ಣುತ್ತಿದ್ದರು. ಅವರ ಆಹಾರವು ತಣ್ಣಗಿರಲೆಂದು ಪುಟ್ಟ ಶಾರದೆ, ಬೀಸಣಿಗೆ ಬೀಸುತ್ತಿದ್ದಳು. ಜನರ ಸಂಕಷ್ಟದ ಅರಿವು ಅವಳಿಗೆ ಅಂದಾಯಿತು. ಮುಂದೆ ಶ್ರೀಮಾತೆಯವರು ಬಡಬಗ್ಗರು, ದೀನದಲಿತರೆನ್ನದೆ ಎಲ್ಲರಿಗೂ ಸಾಂತ್ವನದ ಸುಧೆ ಹರಿಸುವ ಕರುಣಾ ವಾರಿಧಿಯಾದರು. **ಅದಕ್ಕೆ ಪ್ರೇರಣೆ ಸಿಕ್ಕಿದ್ದು ಅವರ ತಂದೆಯಿಂದ.**

ಉಪಾಧ್ಯಾಯರ ಪ್ರಭಾವ

### ಉಪಾಧ್ಯಾಯರು ಮಾರ್ಗದರ್ಶಕರಾದರು

೧೮೮೧ನೆಯ ಇಸವಿ. ನರೇಂದ್ರ ಓದುತ್ತಿದ್ದ ಕಾಲೇಜಿನ ಪ್ರಿನ್ಸಿಪಾಲ್ ವಿಲಿಯಮ್ ಹೇಸ್ಟಿ, ಇಂಗ್ಲಿಷ್ ಕವಿ ವರ್ಡ್ಸ್‌ವರ್ತನ 'ಎಕ್ಸ್‌ಕರ್ಷನ್' ಎಂಬ ಕವನವನ್ನು ವಿದ್ಯಾರ್ಥಿಗಳಿಗೆ ಪಾಠ ಮಾಡುತ್ತಿದ್ದರು. ಅಲ್ಲಿ ಇಂದ್ರಿಯಾತೀತ ಅನುಭವದ ವರ್ಣನೆ ಬರುತ್ತದೆ. ಅದನ್ನು ಅರ್ಥಮಾಡಿಕೊಳ್ಳಬೇಕಾದರೆ, ದಕ್ಷಿಣೇಶ್ವರದ ರಾಮಕೃಷ್ಣ ಪರಮಹಂಸರನ್ನು ದರ್ಶಿಸಿದರೆ ಒಳಿತು ಎಂದರು ಅವರು. ಹೀಗೆ, ಮೊಟ್ಟಮೊದಲು **ನರೇಂದ್ರ ಶ್ರೀರಾಮಕೃಷ್ಣರ ಹೆಸರು ಕೇಳಿದ್ದು ಹೇಸ್ಟಿಯವರ ಬಾಯಿಂದಲೇ.** ಕೆಲವು ದಿವಸಗಳಾದ ಮೇಲೆ, ನರೇಂದ್ರ ಶ್ರೀರಾಮಕೃಷ್ಣರನ್ನು ನೋಡಲು ಹೋಗುತ್ತಾನೆ. ಮುಂದೆ ನಡೆದಿದ್ದು ಇತಿಹಾಸ.

### ಧ್ಯೇಯ ತೋರಿದ ಉಪಾಧ್ಯಾಯ

ಭಾರತರತ್ನ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರಿಗೆ ಪ್ರೇರಣೆ ನೀಡಿದವರು ಯಾರು ಗೊತ್ತೆ? **ಪ್ರಾಥಮಿಕ ಶಾಲೆಯಲ್ಲಿ ಅವರ ಉಪಾಧ್ಯಾಯರಾಗಿದ್ದ ಶ್ರೀ ಶಿವಸುಬ್ರಹ್ಮಣ್ಯ ಅಯ್ಯರ್ ಅವರು.** ಅವರು ಒಮ್ಮೆ ಹಕ್ಕಿಗಳ ಹಾರುವಿಕೆಯ ಬಗ್ಗೆ ಮಕ್ಕಳಿಗೆ ಬೋಧಿಸಿದರು. ಅದು ಮಕ್ಕಳಿಗೆ ಅರ್ಥವಾಗಲಿಲ್ಲವೆಂದು, ರಾಮೇಶ್ವರದ ಕಡಲತೀರಕ್ಕೆ ಕರೆದುಕೊಂಡು ಹೋಗಿ, ಹಕ್ಕಿಗಳನ್ನು ತೋರಿಸುತ್ತ, ಅವು ಹಾರುವ ವಿಧಾನವನ್ನು ವಿವರಿಸಿದರು. ಇದು ಅಬ್ದುಲ್ ಕಲಾಂ ಅವರ ಎಳೆಯ ಮನಸ್ಸಿನ ಮೇಲೆ ಗಾಢ ಪ್ರಭಾವ ಬೀರಿತು; ಅವರ ಜೀವನಕ್ಕೆ ಗುರಿ ಮತ್ತು ಧ್ಯೇಯವನ್ನು ನೀಡಿತು; ಅವರನ್ನು ಮಹಾನ್ ವಿಜ್ಞಾನಿಯನ್ನಾಗಿ ರೂಪಿಸಿ, ಅಸಂಖ್ಯ ಯುವಜನರ ಆದರ್ಶವನ್ನಾಗಿ ಮಾಡಿತು.

### ನಾವು ಮಕ್ಕಳಿಗೆ ಆದರ್ಶವಾಗಲು ಏನೇನು ಮಾಡಬೇಕು?

**೧. ನಮ್ಮ ಮಕ್ಕಳಲ್ಲಿರುವ ಸುಪ್ತ ಪ್ರತಿಭೆಯನ್ನು ಪ್ರಕಟಗೊಳಿಸುವುದು ಮೊದಲ ಹೆಜ್ಜೆ. ಅದಕ್ಕಾಗಿ ಅವರ ವ್ಯಕ್ತಿತ್ವದಲ್ಲಿರುವ ವಿಶಿಷ್ಟ ಅಂಶಗಳನ್ನು ಗುರುತಿಸಬೇಕು. ಅವರ ಆಂತರಿಕ ಶಕ್ತಿಯನ್ನು ಬಹಳ ಸಹನೆಯಿಂದ, ಜಾಗರೂಕತೆಯಿಂದ ಪ್ರಕಟಗೊಳಿಸಬೇಕು. ಶಿಕ್ಷಕರಾಗಿ, ಮತ್ತು ಪೋಷಕರಾಗಿ, ಇದೇ ನಮ್ಮ ದೇಶಕ್ಕೆ ನಾವು ನೀಡಬಹುದಾದ ದೊಡ್ಡ ಕೊಡುಗೆ; ಮಾಡಬಹುದಾದ ದೊಡ್ಡ ಸೇವೆ. ಏಕೆಂದರೆ, ಪ್ರಜ್ಞಾಪೂರ್ಣ ಪ್ರಜೆಗಳೇ ದೇಶದ ನಿಜವಾದ ಸಂಪತ್ತು.**

**೨. ನಮ್ಮ ಮಕ್ಕಳನ್ನು ಪ್ರಭಾವಕ್ಕೆ ಒಳಪಡಿಸುವಂತಹ ಉನ್ನತ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವುದು ನಮ್ಮ ಹೊಣೆಗಾರಿಕೆಯಾಗಿದೆ. ಶಬ್ದಗಳು ಮತ್ತು ಚಿಂತನೆಗಳಿಗೆ ಶಕ್ತಿ ಬರುವುದು ಅವುಗಳ ಹಿಂದಿನ ವ್ಯಕ್ತಿತ್ವದಿಂದ; ಅವುಗಳ ಬಗ್ಗೆ ಮಾತನಾಡುವವನ ಜೀವನದಿಂದ. ನಮ್ಮ ಬುದ್ಧಿವಾದದ ಮಾತುಗಳು ಮಕ್ಕಳನ್ನು ತಟ್ಟದಿದ್ದರೆ, ಅದಕ್ಕೆ ನಮ್ಮ ವ್ಯಕ್ತಿತ್ವದಲ್ಲಿರುವ ನ್ಯೂನತೆಯೇ ಕಾರಣ. ನಮ್ಮ ಮಾತುಗಳ ಹಿಂದೆ ದೃಢತೆ ಮತ್ತು ಚಾರಿತ್ರ್ಯದ ಬಲ ಇದ್ದರೆ ಮಕ್ಕಳು ಅದನ್ನು ಖಂಡಿತವಾಗಿಯೂ ಸ್ವೀಕರಿಸುವರು. ಬರಿಯ ಉಪದೇಶ ಸಾಲದು. ನಾವು ಬೋಧಿಸುವ ಮೌಲ್ಯಗಳಿಗೆ ತದ್ವಿರುದ್ಧವಾಗಿ ನಮ್ಮ ಆಚರಣೆ ಇದ್ದರೆ, ಆಗ ನಾವು ಮಕ್ಕಳಿಗೆ ಹೇಳಿಕೊಡುತ್ತಿರುವುದು ಕಪಟತನವಷ್ಟೇ ಅಲ್ಲದೆ, ಬೇರೇನೂ ಅಲ್ಲ. ಅದಕ್ಕೇ ಅಮೆರಿಕನ್ ಚಿಂತಕ ಎಮರ್‌ಸನ್ ಹೇಳುತ್ತಾನೆ: *"ಗಟ್ಟಿಯಾಗಿ ಅರಚುವ ನೀನಾರು ಅಲ್ಲಿ? ಕೇಳಿಸದು ನನಗೆ ಏನೂ ಅದರಲ್ಲಿ."* ಒಟ್ಟಿನಲ್ಲಿ, ಮಕ್ಕಳ ಮೇಲಿನ ನಮ್ಮ ಪ್ರಭಾವ ಮತ್ತು ನಿಯಂತ್ರಣವು ನಮ್ಮ ಮೇಲೆ ನಮಗಿರುವ ನಿಯಂತ್ರಣಕ್ಕೆ ಸರಿಸಮಾನವಾಗಿರುತ್ತದೆ.** (ಕೃಪೆ: Parents and Teachers in Value Education, Publisher: Ramakrishna Mission, Belur Math) **(ಮುಂದಿನ ತಿಂಗಳ ವಿಷಯ : ಮೌಲ್ಯಗಳ ಅರಿವು.)** (*ಭಾವಾನುವಾದ: ಸಂ.*)